# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | **141** |
| **ಸದಸ್ಯರ ಹೆಸರು** | **ಶ್ರೀ ಎಂ. ನಾಗರಾಜು (ವಿಧಾನ ಸಭೆಯಿಂದ ಚುನಾಯಿತರಾದವರು)** |
| **ಉತ್ತರಿಸಬೇಕಾದ ದಿನಾಂಕ** | **19.12.2022** |
| **ಉತ್ತರಿಸಬೇಕಾದ ಸಚಿವರು** | **ಮಾನ್ಯ ಉನ್ನತ ಶಿಕ್ಷಣ, ಐಟಿ-ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ವಿದ್ಯುನ್ಮಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು.** |
| **ಪ್ರಶ್ನೆ** | **ಉತ್ತರ** |
| ಅ) 2019-20, 2020-21 ಮತ್ತು 2021-22ರ ಸಾಲಿನಲ್ಲಿ ಎಲೆಕ್ಟ್ರಾನಿಕ್ಸ್ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ, ಇಲಾಖೆಗಳು ಕಾರ್ಯನೀತಿ ಉಪಕ್ರಮಗಳನ್ನು ಅನುಷ್ಠಾನಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳಾವುವು; | 2019-20, 2020-21 ಮತ್ತು 2021-22ರ ಸಾಲಿನಲ್ಲಿ ಎಲೆಕ್ಟ್ರಾನಿಕ್ಸ್, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಕಾರ್ಯನೀತಿ ಉಪಕ್ರಮಗಳನ್ನು ಅನುಷ್ಠಾನಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳನ್ನು **ಅನುಬಂಧ-1** ರಲ್ಲಿರಿಸಿದೆ. |
| ಆ) ದಿನಾಂಕ:16/11/2022 ರಿಂದ 18/11/2022 ರವರೆಗೆ ಬೆಂಗಳೂರು ಅರಮನೆ ಮೈದಾನದಲ್ಲಿ ಎಲೆಕ್ಟ್ರಾನಿಕ್ಸ್ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ ಹಾಗೂ ಎಸ್.ಟಿ.ಪಿ.ಐ., ಬೆಂಗಳೂರುರವರ ಸಹಯೋಗದಲ್ಲಿ ಆಯೋಜಿಸಿದ ಬೆಂಗಳೂರು ಟೆಕ್ ಸಮ್ಮಿಟ್ -2022 , ರಜತ ಮಹೋತ್ಸವಕ್ಕೆ ಸಮ್ಮಿಟ್ ಗೆ ಸರ್ಕಾರವು ವೆಚ್ಚ ಮಾಡಿದ ಹಣವೆಷ್ಟು; | ದಿನಾಂಕ:16/11/2022 ರಿಂದ 18/11/2022 ವರೆಗೆ ಬೆಂಗಳೂರು ಅರಮನೆ ಮೈದಾನದಲ್ಲಿ ಎಲೆಕ್ಟ್ರಾನಿಕ್ಸ್, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ ಹಾಗೂ ಎಸ್.ಟಿ.ಪಿ.ಐ., ಬೆಂಗಳೂರುರವರ ಸಹಯೋಗದಲ್ಲಿ ಆಯೋಜಿಸಿದ ಬೆಂಗಳೂರು ಟೆಕ್ ಸಮ್ಮಿಟ್ - 2022ರ ರಜತ ಮಹೋತ್ಸವಕ್ಕೆ ಇಲ್ಲಿಯವರೆಗೂ ಸರ್ಕಾರವು ಒಟ್ಟು ಅಂದಾಜು ವೆಚ್ಚ - ರೂ.14.49 ಕೋಟಿ + ಅನ್ವಯವಾಗುವ GST ಯನ್ನು ನಿಗದಿಪಡಿಸಲಾಗಿದೆ ಮತ್ತು ಮುಂದುವರೆದು ಸರ್ಕಾರದಿಂದ ಇಲ್ಲಿಯವರೆವಿಗೂ ರೂ.8,63,90,000 + ಅನ್ವಯವಾಗುವ GST ವೆಚ್ಚ ಮಾಡಲಾಗಿದೆ. |
| ಇ) ಬೆಂಗಳೂರು ಟೆಕ್ ಸಮ್ಮಿಟ್ -2022, ನಲ್ಲಿ , ಎಷ್ಟು ಸ್ಟಾಲ್ ಗಳನ್ನು ತೆರೆಯಲಾಗಿತ್ತು, ಸದರಿ ಸ್ಟಾಲ್‌ಗಳಿಗೆ ನಿಗದಿಪಡಿಸಿದ ಬಾಡಿಗೆಯಷ್ಟು; ಇದರಿಂದ ಸರ್ಕಾರಕ್ಕೆ ಹಿಂತಿರುಗಿ ಬಂದ ಮೊತ್ತವೆಷ್ಟು; ಬೆಂಗಳೂರು ಟೆಕ್ ಸಮ್ಮಿಟ್ - 2022, ಆಯೋಜನೆಯಿಂದ ಹರಿದು ಬಂದ ಬಂಡವಾಳ / ಹೂಡಿಕೆಯೆಷ್ಟು; | ಬೆಂಗಳೂರು ಟೆಕ್ ಸಮ್ಮಿಟ್ -2022 ರಲ್ಲಿ ಒಟ್ಟು 585 ಸ್ಟಾಲ್ ಗಳನ್ನು ತೆರೆಯಾಲಾಗಿತ್ತು.<br>ಸದರಿ ಸ್ಟಾಲ್‌ಗಳಿಗೆ ಇಲಾಖೆಯಿಂದ ಯಾವುದೇ ಬಾಡಿಗೆಯನ್ನು ನಿಗದಿಪಡಿಸಿರುವುದಿಲ್ಲ ಹಾಗೂ ಇದರಿಂದ ಸರ್ಕಾರಕ್ಕೆ ಯಾವುದೇ ಮೊತ್ತವು ಹಿಂತಿರುಗಿ ಬಂದಿರುವುದಿಲ್ಲ. ಬೆಂಗಳೂರು ಟೆಕ್ ಸಮ್ಮಿಟ್ -2022, ಆಯೋಜನೆಯು ಬಂಡವಾಳ ಹೂಡಿಕೆ ಮಾಡುವುದಾಗಿರುವುದಿಲ್ಲ. ಈ ಸಮಾವೇಶದಿಂದ ಪರೋಕ್ಷವಾಗಿ ರಾಜ್ಯದ ಆರ್ಥಿಕತೆ ಹಾಗೂ ಉದ್ಯೋಗಾವಕಾಶಗಳು ಅಭಿವೃದ್ಧಿ ಹೊಂದುತ್ತವೆ. ಮುಂದುವರೆದು, ಈ ಟೆಕ್ ಸಮ್ಮಿಟ್ ನಲ್ಲಿ ದೇಶ ವಿದೇಶಗಳಲ್ಲಿ ಆಗಿರುವ ತಾಂತ್ರಿಕ ಮತ್ತು ಸಂಶೋಧನೆಗಳ ವಿಚಾರ ವಿನಿಮಯವಾಗುವುದು ರಾಜ್ಯಕ್ಕೆ ಹೆಗ್ಗಳಿಕೆಯ ವಿಷಯವಾಗಿದೆ. |

| | |
|---|---|
| ಈ) ಬೆಂಗಳೂರು ಟೆಕ್ ಸಮ್ಮಿಟ್ -2022, ಆಯೋಜನೆಯಿಂದ ರಾಜ್ಯದಲ್ಲಿ ಬೆಂಗಳೂರು ನಗರ ಸೇರಿದಂತೆ ಎಷ್ಟು ಸ್ಟಾರ್ಟಪ್ ಕಂಪನಿಗಳು ನೋಂದಾಯಿಸಿಕೊಂಡು ತಮ್ಮ ಕಾರ್ಯಾಚರಣೆಯನ್ನು ಪ್ರಾರಂಭಿಸಿದೆ; ಇದರಿಂದ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಸೃಷ್ಟಿಯಾದ ಉದ್ಯೋಗಾವಕಾಶಗಳೆಷ್ಟು; | ರಾಜ್ಯದಲ್ಲಿ ಸ್ಟಾರ್ಟ್‌ಅಪ್‌ಗಳನ್ನು ನೋಂದಣಿ ಮಾಡಿಕೊಳ್ಳುವ ಪ್ರಕ್ರಿಯೆಯು ವರ್ಷಪೂರ್ತಿ ಚಾಲನೆಯಲ್ಲಿದ್ದು, ಬಿಟಿಎಸ್-2022 ರಲ್ಲಿ ವಿಶೇಷವಾಗಿ ಯಾವುದೇ ನೋಂದಣಿ ಪ್ರಕ್ರಿಯೆ ನಡೆಸಿರುವುದಿಲ್ಲ. |
| ಉ) ಬೆಂಗಳೂರು ಟೆಕ್ ಸಮ್ಮಿಟ್ -2022, ರ ಪ್ರಾಯೋಜಕರೆಷ್ಟು ಮತ್ತು ಸದರಿ ಪ್ರಾಯೋಜಕರಿಂದ ಸರ್ಕಾರದ ಬೊಕ್ಕಸಕ್ಕೆ ಬಂದ ಮೊತ್ತವೆಷ್ಟು; | ಬೆಂಗಳೂರು ಟೆಕ್ ಸಮ್ಮಿಟ್-2022 ರ ಕಾರ್ಯಕ್ರಮದ ಆಯೋಜನೆಗಾಗಿ ಸರ್ಕಾರವು ಯಾವುದೇ ರೀತಿಯ ಪ್ರಾಯೋಜಕತ್ವವನ್ನು ಪಡೆದಿರುವುದಿಲ್ಲ. ಆದ್ದರಿಂದ ಈ ಸಮಾವೇಶದಿಂದ ಸರ್ಕಾರದ ಬೊಕ್ಕಸಕ್ಕೆ ಯಾವುದೇ ಮೊತ್ತವು ಹರಿದು ಬಂದಿರುವುದಿಲ್ಲ. |
| ಊ) ಪ್ರಸಕ್ತ ಸಾಲಿನ ಸಿ.ಇ.ಟಿ ಮುಖಾಂತರ ಒಟ್ಟು ಎಷ್ಟು ಇಂಜಿನೀಯರಿಂಗ್ ಸೀಟ್‌ಗಳನ್ನು ಹಂಚಿಕೆ ಮಾಡಲಾಗಿದೆ ಹಾಗೂ ಉಳಿದ ಇಂಜಿನೀಯರಿಂಗ್ ಸೀಟ್‌ಗಳೆಷ್ಟು; (ವಿವರಗಳನ್ನು ಒದಗಿಸುವುದು) | ಪ್ರಸಕ್ತ ಸಾಲಿನಲ್ಲಿ (2022) ಕರ್ನಾಟಕದ ಪರೀಕ್ಷಾ ಪ್ರಾಧಿಕಾರದ ಮೂಲಕ ಒಟ್ಟು 50,272 ಇಂಜಿನಿಯರಿಂಗ್ ಸೀಟುಗಳನ್ನು ಹಂಚಿಕೆ ಮಾಡಲಾಗಿದೆ ಹಾಗೂ ಉಳಿದ ಇಂಜಿನಿಯರಿಂಗ್ ಸೀಟುಗಳ ಸಂಖ್ಯೆ: 14,282. |
| ಋ) ಅಧಿನಿಯಮ ಪರಿಚ್ಛೇಧ 135 ಅನುಸಾರ ಅರ್ಹ ಸಾರ್ವಜನಿಕ ವಲಯ ಉದ್ಯಮಗಳು ಕಳೆದ 3 ವರ್ಷಗಳಲ್ಲಿ ಮಾಡಿರುವ ಸರಾಸರಿ ಲಾಭದ ಕನಿಷ್ಟ ಶೇ. 2ರಷ್ಟನ್ನು ತಮ್ಮ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿಯ ಮೇಲೆ ಭರಿಸತಕ್ಕದ್ದು ಎಂಬ ವಿಷಯವು ಸರ್ಕಾರದ ಗಮನದಲ್ಲಿದೆಯೇ; ಸರ್ಕಾರಿ ಸಂಸ್ಥೆಗಳು ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಚಟುವಟಿಕೆಗಳನ್ನು ಕೈಗೊಂಡಿವೆಯೆ? (ಇಲಾಖಾವಾರು / ನಿಗಮವಾರು ಸಂಪೂರ್ಣ ಮಾಹಿತಿಯನ್ನು ನೀಡುವುದು) | ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತವು (ಕಿಯೋನಿಕ್ಸ್) ಒಂದು ಸಾರ್ವಜನಿಕ ಉದ್ಯಮವಾಗಿದ್ದು, ಪ್ರತಿ ವರ್ಷ ಹಿಂದಿನ ಮೂರು ವರ್ಷಗಳಲ್ಲಿ ಮಾಡಿರುವ ಸರಾಸರಿ ಲಾಭದ ಕನಿಷ್ಠ ಶೇ. 2 ರಷ್ಟನ್ನು ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿಯ ಮೇಲೆ ಭರಿಸಲಾಗುತ್ತಿದೆ ಮತ್ತು ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಚಟುವಟಿಕೆಗಳನ್ನು ಕೈಗೊಂಡಿದೆ. ಕಳೆದ 3 ಹಣಕಾಸಿನ ವರ್ಷಗಳ ವಿವರವನ್ನು **ಅನುಬಂಧ-2** ರಲ್ಲಿರಿಸಿದೆ. |

(ಐಟಿಬಿಟಿ 111 ಎಲ್‌ಸಿಎಂ 2022)

**(ಡಾ || ಅಶ್ವಥ್ ನಾರಾಯಣ ಸಿ. ಎನ್.)**
ಉನ್ನತ ಶಿಕ್ಷಣ, ಐಟಿ-ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ,
ವಿದ್ಯುನ್ಮಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ
ಮತ್ತು ಜೀವನೋಪಾಯ ಸಚಿವರು.

## ಅನುಬಂಧ - 1

2019-20, 2020-21 ಮತ್ತು 2021-22ರ ಸಾಲಿನಲ್ಲಿ ಎಲೆಕ್ಟ್ರಾನಿಕ್ಸ್, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಗಳು ಕಾರ್ಯನೀತಿ ಉಪಕ್ರಮಗಳನ್ನು ಅನುಷ್ಠಾನಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳು ಈ ಕೆಳಕಂಡಂತಿರುತ್ತವೆ:-

ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಿಂದ IT, BT, ESDM, AVGC ವಲಯಗಳಿಗೆ ಹಾಗೂ Startup ಗಳಿಗೆ ಪ್ರತ್ಯೇಕ ನೀತಿಯನ್ನು ಜಾರಿಗೊಳಿಸಲಾಗಿದೆ ಹಾಗೂ ಅನುಷ್ಠಾನಗೊಳಿಸಲಾಗುತ್ತಿದೆ. ಇಲಾಖಾ ಮಟ್ಟದಲ್ಲಿ ತಂತ್ರಜ್ಞಾನ ಕ್ಷೇತ್ರಗಳ ಬಗ್ಗೆ ಮಾರ್ಗದರ್ಶನ ನೀಡಲು ಸಲಹೆ/ಸೂಚನೆಗಳನ್ನು ನೀಡಲು IT, BT, Startup ವಲಯದ ದಿಗ್ಗಜರ ನೇತೃತ್ವದಲ್ಲಿ Vision Group on IT, Bt and Startup ಗಳನ್ನು ರಚಿಸಲಾಗಿರುತ್ತದೆ. ಆಯಾಕ್ಷೇತ್ರದ ನೀತಿಗಳನ್ನು ರೂಪಿಸಲು ಮಾರ್ಗಗಳನ್ನು ರಚಿಸಲು ಹಾಗೂ ಅನುಷ್ಠಾನಗೊಳಿಸಲು ಕೈಗಾರಿಕೆಗಳಿಂದ ಹಾಗೂ ಶೈಕ್ಷಣಿಕ ಸಂಸ್ಥೆಗಳಿಂದ ವಿಷಯ ತಜ್ಞರನ್ನೊಳಗೊಂಡ ಸಮಿತಿಗಳನ್ನು ರಚಿಸಲಾಗಿರುತ್ತದೆ ಹಾಗೂ ಯೋಜನೆಗಳನ್ನು/ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಗುತ್ತಿದೆ. ಇದಲ್ಲದೇ, ಕೈಗಾರಿಕಾ ಸಂಘ ಸಂಸ್ಥೆಗಳೊಡನೆ, ಶೈಕ್ಷಣಿಕ ಸಂಸ್ಥೆಗಳೊಡನೆ ಹಾಗೂ Ecosystem Partner ಗಳಾದ Incubator/Accelerators ಗಳೊಂದಿಗೆ ಸಂಯೋಜನೆ ನಡೆಸಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಮೇಲ್ಕಾಣಿಸಿದ ಕ್ರಮದೊಂದಿಗೆ, ಸರ್ಕಾರ ಮತ್ತು ಕೈಗಾರಿಕಾ ಸಂಘ ಸಂಸ್ಥೆಗಳು ಒಗ್ಗೂಡಿಕೊಂಡ KDEM ಎಂಬ ಸಂಸ್ಥೆಯನ್ನು ಸ್ಥಾಪಿಸಿ ಪ್ರಮುಖವಾಗಿ "Beyond Bengaluru" ಎಂಬ ಉಪಕ್ರಮವನ್ನು ರಾಜ್ಯಾದ್ಯಂತ ಕಾರ್ಯಾಚರಣೆಯನ್ನು ಮಾಡಲಾಗುತ್ತಿದೆ.

1. ಮಾಹಿತಿ ತಂತ್ರಜ್ಞಾನ ಪಾಲಿಸಿ:

ಮಾಹಿತಿ ತಂತ್ರಜ್ಞಾನ

(i) ಕರ್ನಾಟಕ ಐಟಿ ಕಾರ್ಯನೀತಿ 2020-25

ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯು ದಿನಾಂಕ 7ನೇ ಸೆಪ್ಟೆಂಬರ್, 2020 ರಂದು ಕರ್ನಾಟಕ ಮಾಹಿತಿ ತಂತ್ರಜ್ಞಾನ ಕಾರ್ಯನೀತಿಯನ್ನು ಪ್ರಕಟಿಸಿದ್ದು, ಹೊಸ ಐಟಿ/ ಐಟಿಇಎಸ್ ಮತ್ತಿತರ ಜ್ಞಾನಾಧಾರಿತ ವಲಯದ ಕೈಗಾರಿಕೋದ್ಯಮಿಗಳು ಕರ್ನಾಟಕ ರಾಜ್ಯದೆಲ್ಲೆಡೆ ಇರುವ ಹಂತ 2/3ರ ನಗರಗಳಲ್ಲಿ ತಮ್ಮ ಸೌಲಭ್ಯಗಳನ್ನು ಸ್ಥಾಪಿಸಿಕೊಳ್ಳಲು ಸದರಿ ನೀತಿಯಲ್ಲಿ ಅನೇಕ ಪ್ರೋತ್ಸಾಹಕಗಳನ್ನು ಕಲ್ಪಿಸಲಾಗಿರುತ್ತದೆ.

ಐಟಿ ಕಾರ್ಯನೀತಿಯ ಕೆಲವು ಪ್ರಮುಖಾಂಶಗಳು ಈ ಕೆಳಕಂಡಂತಿವೆ:

- ರೂ.250.00 ಕೋಟಿಗಿಂತ ಹೆಚ್ಚಿನ ಬೃಹತ್ ಕಾರ್ಯ ಯೋಜನೆಗಳಿಗೆ ಆಯಾ ಉದ್ದಿಮೆಗೆ ಅನುಗುಣವಾಗಿ ಪ್ರೋತ್ಸಾಹಕಗಳನ್ನು ನೀಡುವ ಬಗ್ಗೆ
- ವಲಯ 3ಕ್ಕೆ ಹೊರತಾದ ಪ್ರದೇಶದಲ್ಲಿ ಮಾಹಿತಿ ತಂತ್ರಜ್ಞಾನ ವಲಯ/ ಕ್ಲಸ್ಟರ್ ಸ್ಥಾಪನೆಗೆ ರೂ.3.00 (ಮೂರು) ಕೋಟಿಗಳವರೆಗೂ ಹಣಕಾಸಿನ ನೆರವು
- ಪ್ರತಿ ಚದರ ಅಡಿಗೆ ರೂ.10ರ ದರದಲ್ಲಿ ಗರಿಷ್ಠ ರೂ.3.00 (ಮೂರು) ಲಕ್ಷದವರೆಗೆ ಗುತ್ತಿಗೆ/ಬಾಡಿಗೆ ಮರುಪಾವತಿ
- ವಲಯ 3ಕ್ಕೆ ಹೊರತಾದ ಪ್ರದೇಶದಲ್ಲಿ ಸಂಘಟನಾ ಕಾರ್ಯಸ್ಥಾನಗಳು (ಕೋವರ್ಕಿಂಗ್ ಸ್ಪೇಸ್) ಬಳಕೆಗೆ ಸಂಪೂರ್ಣ ಸನ್ನದ್ಧಗೊಂಡ (ಪ್ಲಗ್ ಅಂಡ್ ಪ್ಲೇ) ಮೂಲಸೌಕರ್ಯಗಳಿಗಾಗಿ ರೂ.2.00 (ಎರಡು) ಕೋಟಿಗಳ ವರೆಗೆ ಹಣಕಾಸು ನೆರವು
- ಮೈಸೂರು, ಹುಬ್ಬಳ್ಳಿ, ಧಾರವಾಡ ಹಾಗೂ ಮಂಗಳೂರಿನಲ್ಲಿ ಶೇ. 75ರಷ್ಟು ಮುದ್ರಾಂಕ ಶುಲ್ಕ ವಿನಾಯಿತಿ. ವಲಯ 3ಕ್ಕೆ ಹೊರತುಪಡಿಸಿ ಬೇರೆಲ್ಲಾ ವಲಯಗಳಲ್ಲಿ ಶೇ. 100ರಷ್ಟು ಮುದ್ರಾಂಕ ಶುಲ್ಕ ವಿನಾಯಿತಿ
- ಹೊರಹೊಮ್ಮುತ್ತಿರುವ ತಾಂತ್ರಿಕತೆಗಳ ಸಂಶೋಧನ ಮತ್ತು ಅಭಿವೃದ್ಧಿಗಾಗಿ (ಆರ್&ಡಿ) ರೂ.1.00 (ಒಂದು) ಕೋಟಿಯವರೆಗೆ ಅಥವಾ 33%ವರೆಗೆ ಸಂಶೋಧನಾ ಮತ್ತು ಅಭಿವೃದ್ಧಿ ನೆರವು.
- ನಮ್ಮ ದೇಶದಲ್ಲಿನ ಪೇಟೆಂಟ್‌ಗಾಗಿ ರೂ.2.00 (ಎರಡು) ಲಕ್ಷಗಳ ವೆಚ್ಚ ಮರುಪಾವತಿ ಹಾಗೂ ಅಂತರರಾಷ್ಟ್ರೀಯ ಪೇಟೆಂಟ್‌ಗಾಗಿ ರೂ.10.00 (ಹತ್ತು) ಲಕ್ಷಗಳ ವೆಚ್ಚ ಮರುಪಾವತಿ ಮಾಡಲಾಗಿದೆ.

- ವಲಯ 3 ಕ್ಕೆ ಹೊರತಾದ ಪ್ರದೇಶದಲ್ಲಿ ರೂ.6.00 (ಆರು) ಲಕ್ಷದವರೆಗೆ ಗುಣಮಟ್ಟ ಪ್ರಮಾಣ ಪತ್ರ ವೆಚ್ಚ ಮರುಪಾವತಿ.
- ವಲಯ 3 ಕ್ಕೆ ಹೊರತಾದ ಪ್ರದೇಶದಲ್ಲಿ ಪ್ರತಿ ಘಟಕಕ್ಕೆ ರೂ. 5(ಐದು)ಲಕ್ಷದವರೆಗೆ ಮಾರ್ಕೆಟಿಂಗ್ ವೆಚ್ಚ ಮರುಪಾವತಿ.
- ವಿದ್ಯುತ್ ದರದಲ್ಲಿ ರಿಯಾಯಿತಿ

2. ಇಎಸ್‌ಡಿಎಂ ಪಾಲಿಸಿ:

ಕರ್ನಾಟಕ ವಿದ್ಯುನ್ಮಾನ ವ್ಯವಸ್ಥೆಗಳ ವಿನ್ಯಾಸ ಮತ್ತು ಉತ್ಪಾದನಾ ನೀತಿ 2017-22

ಕರ್ನಾಟಕ ಸರ್ಕಾರವು ಕಿಟ್ಸ್ ಸಂಸ್ಥೆಯ ಮುಖಾಂತರ ದಿನಾಂಕ 1ನೇ ಡಿಸೆಂಬರ್ 2017ರಂದು ಹೊಸ ಇಎಸ್‌ಡಿಎಂ ನೀತಿ 2017-22ಯನ್ನು ಘೋಷಿಸಿದ್ದು, ರಾಜ್ಯದ ಇಎಸ್‌ಡಿಎಂ ಕಂಪನಿಗಳಿಗೆ ಪೂರಕ ವಾತಾವರಣದ ಬೆಂಬಲ ಮತ್ತು ವಿವಿಧ ಪ್ರೋತ್ಸಾಹಕಗಳು/ರಿಯಾಯಿತಿಗಳನ್ನು ಕಲ್ಪಿಸಿದೆ.

ಗುರಿಗಳು

ಸದರಿ ನೀತಿಯು ಇಎಸ್‌ಡಿಎಂ ಉದ್ಯಮಕ್ಕಾಗಿ ಉನ್ನತ ಬೆಳವಣಿಗೆಯನ್ನು ಪೋಷಿಸುವ ಗುರಿಯನ್ನು ಹೊಂದಿದ್ದು, ಇದನ್ನು ಈ ಕೆಳಕಂಡ ಗುರಿಗಳನ್ನು ತಲುಪುವ ಮೂಲಕ ಸಾಧಿಸಬಹುದಾಗಿದೆ:

- ಸದರಿ ನೀತಿಯ ಅವಧಿಯಲ್ಲಿ 2000 ಇಎಸ್‌ಡಿಎಂ ನವೋದ್ಯಮಗಳ ಬೆಳವಣಿಗೆಯನ್ನು ಹುಟ್ಟುಹಾಕುವುದು.
- ಕರ್ನಾಟಕದಲ್ಲಿ ಕಲ್ಪಿಸುವ ಮೌಲ್ಯವರ್ಧನೆಯನ್ನು ಶೇ.50ರಷ್ಟು ಹೆಚ್ಚಿಸುವುದು.
- 2025ನೇ ಇಸವಿಯಷ್ಟರಲ್ಲಿ ಇಎಸ್‌ಡಿಎಂ ಉದ್ಯಮದಲ್ಲಿ 20 ಲಕ್ಷದಷ್ಟು ಪ್ರತ್ಯಕ್ಷ ಮತ್ತು ಪರೋಕ್ಷಗಳೆರಡೂ ಸೇರಿದಂತೆ ಹೊಸ ಉದ್ಯೋಗಗಳನ್ನು ಸೃಜಿಸುವುದು; ತನ್ಮೂಲಕ ಸದರಿ ವಲಯದಲ್ಲಿ ಒಟ್ಟು ಕಾರ್ಯಬಲವನ್ನು ಪ್ರಸ್ತುತವಿರುವ ಸಂಖ್ಯೆಯ ಹತ್ತು ಪಟ್ಟು ಹೆಚ್ಚಿಸುವುದು.
- ಕರ್ನಾಟಕದ ಇಎಸ್‌ಡಿಎಂ ಕಂಪನಿಗಳ ಒಟ್ಟಾರೆ ಆದಾಯಗಳಲ್ಲಿ, 2025ನೇ ಇಸವಿಯಷ್ಟರಲ್ಲಿ 40 ಬಿಲಿಯನ್ ಯು.ಎಸ್. ಡಾಲರ್‌ಗಳಷ್ಟು ಗಣನೀಯ ಏರಿಕೆಯಾಗಿಸುವುದು.
- 2025ರಷ್ಟರಲ್ಲಿ ರಾಜ್ಯದ ಇಎಸ್‌ಡಿಎಂ ರಫ್ತುಗಳನ್ನು 16 ಬಿಲಿಯನ್ ಯು.ಎಸ್ ಡಾಲರ್‌ಗಳಿಗೆ ಗಣನೀಯವಾಗಿ ಬೆಳೆಸುವುದು.

ಕಾರ್ಯ ನೀತಿಗಳು

- **ಕೌಶಲ್ಯಾಭಿವೃದ್ಧಿ:** ಗಮನವನ್ನು ಕೇಂದ್ರೀಕರಿಸಿದ ವಲಯಗಳಿಗಾಗಿ ಪ್ರಸ್ತುತವಿರುವ ಉಪಕ್ರಮಗಳನ್ನು ಹಸನುಗೊಳಿಸಿ ಬಲಪಡಿಸುವ, ಹೊಸದವುಗಳನ್ನು ಪರಿಚಯಿಸುವ ಮೂಲಕ, ಕಾರ್ಯತಂತ್ರಾತ್ಮಕ ಮಧ್ಯಸ್ಥಿಕೆಗಳ ಮೂಲಕ ಕೌಶಲ್ಯದಲ್ಲಿ ಅಭಿವೃದ್ಧಿಯತ್ತ ಹಾಗೂ ಪ್ರತಿಭೆಗಳನ್ನು ಪೋಷಿಸುವತ್ತ ಗಮನವನ್ನು ಮುಂದುವರಿಸುವುದು.
- **ಗುಣಮಟ್ಟದ ಮೂಲಸೌಕರ್ಯ:** ರಾಜ್ಯದೆಲ್ಲೆಡೆ ಹಂತ-2ರ ನಗರಗಳಲ್ಲಿ ಸ್ಥಳೀಯ ಉದ್ಯಮಕ್ಕೆ ಒತ್ತು ನೀಡಲು, ಹೊಸ ಹೂಡಿಕೆಗಳನ್ನು ಮತ್ತು ಬೆಳವಣಿಗೆಯನ್ನು ಉತ್ತೇಜಿಸಲು ಮತ್ತು ಸರ್ವಬಳಕೆಗಾಗಿ ಮೂಲಸೌಕರ್ಯವನ್ನು ಮತ್ತು ನಿರ್ದಿಷ್ಟ ವಲಯಗಳಲ್ಲಿ ಉತ್ಕೃಷ್ಟತಾ ಕೇಂದ್ರಗಳನ್ನು (CoEs) ಸೃಜಿಸುವುದು.
- **ಪೂರಕ ವಾತಾವರಣದ ಬೆಂಬಲ:** ಸ್ಥಳೀಯ ಸಂಗ್ರಹಣೆಗಾಗಿ ಪಿ.ಎಂ.ಎ. ನೀತಿಯನ್ನು ಕಾರ್ಯಗತಗೊಳಿಸುವುದು; ಪ್ರಾಯೋಗಿಕ ಕಾರ್ಯಯೋಜನೆಗಳ ಮೂಲಕ ಮತ್ತು ಬುಡಮಟ್ಟದ ಉದ್ಯಮಶೀಲತೆ ಹಾಗೂ ಐಪಿ ಸೃಜನೆಯವನ್ನು ಉತ್ತೇಜಿಸುವ ಮೂಲಕ ಮುಂದಿನ ಪೀಳಿಗೆಯ ತಂತ್ರಜ್ಞಾನಗಳ ವೇಗವರ್ಧಿಸುವುದು.
- **ನವೋದ್ಯಮಗಳಿಗೆ ಮತ್ತು ಎಂ.ಎಸ್.ಎಂ.ಇ.ಗಳಿಗೆ ಉತ್ತೇಜನ:** ಹೂಡಿಕೆಗಳ ವೇಗವರ್ಧಿಸುವ ಸಲುವಾಗಿ ಪ್ರಸ್ತುತವಿರುವ ಅರೆವಾಹಕ ಸಾಹಸೋದ್ಯಮ ಬಂಡವಾಳ ನಿಧಿಯನ್ನು ಬಲಪಡಿಸುವುದು; ಮಾರುಕಟ್ಟೆ ಅಭಿವೃದ್ಧಿ ಚಟುವಟಿಕೆಗಳು ಮತ್ತು ಸ್ಥಳೀಯ ಕಂಪನಿಗಳಿಗೆ ಬೆಂಬಲ ನೀಡುವ ಮೂಲಕ ಕೆ.ಇ.ಎಸ್.ಡಿ.ಎಂ. ಉದ್ಯಮವು ವಿಸ್ತಾರಗೊಳ್ಳಲು ಮತ್ತು ಬೆಳೆಯುವುದನ್ನು ಪ್ರೋತ್ಸಾಹಿಸುವುದು.

• ವ್ಯವಹಾರವನ್ನು ಸುಗಮವಾಗಿ ಕೈಗೊಳ್ಳುವುದನ್ನು ಉನ್ನತೀಕರಿಸುವುದು: ರಾಜ್ಯದಲ್ಲಿ ವ್ಯವಹಾರ ಮಾಡುವ ಒಟ್ಟಾರೆ ಅನುಭವವನ್ನು ಉನ್ನತೀಕರಿಸಲು ನೀತಿ ಮತ್ತು ವಿಧಿವಿಧಾನಗಳನ್ನು ಸರಳೀಕರಿಸುವುದು; ಸದರಿ ವಲಯದಲ್ಲಿ ಜಾಗತಿಕ ಕಂಪನಿಗಳಿಂದ ಹೂಡಿಕೆಗಳನ್ನು ಆಕರ್ಷಿಸಲು ಪ್ರೋತ್ಸಾಹಕಗಳು ಮತ್ತಿತರ ನೀತಿ ಪ್ರಯೋಜನಗಳು ವೇಗವಾಗಿ ತಲುಪುವ ಅನುಕೂಲಕ್ಕಾಗಿ ತಂತ್ರಗಳನ್ನು ಅಳವಡಿಸುವುದು.

1. KESDM ನೀತಿಯಡಿಯಲ್ಲಿ 31 ಮಾರ್ಚ್ 2022 ರಂತೆ ಸಾಧನೆಗಳು:

ಈ ನೀತಿಯ ಅಡಿಯಲ್ಲಿ ಇಲ್ಲಿಯವರೆಗೆ ಅರವತ್ತನಾಲ್ಕು ಕಂಪನಿಗಳು ನೋಂದಾಯಿತವಾಗಿವೆ. ನೋಂದಾಯಿತ ಕೆಇಎಸ್ ಡಿಎಂ ಕಂಪನಿಗಳಿಗೆ ಇಲ್ಲಿಯವರೆಗೆ ರೂ.12.43 ಕೋಟಿಗಳ ಪ್ರೋತ್ಸಾಹಧನವನ್ನು ವಿತರಿಸಲಾಗಿದೆ ಮತ್ತು ಕಂಪನಿಗಳಿಗೆ ನೀಡಲಾದ ಇತರ ರಿಯಾಯಿತಿಗಳನ್ನು ಸಹ ನೀಡಲಾಗಿದೆ.

| ಕ್ರ. ಸಂ. | ವರ್ಷ | ನೋಂದಾಯಿತ ಕಂಪನಿಗಳ ಸಂಖ್ಯೆ | ವಿತರಿಸಲಾಗಿರುವ ಪ್ರೋತ್ಸಾಹ ಧನ |
|---|---|---|---|
| 1 | 2019-20 | 9 ಕಂಪನಿಗಳು ನೋಂದಣಿಯಾಗಿವೆ | ರೂ.1,54,32,601/- ನ್ನು 10 ESDM ಕಂಪನಿಗಳಿಗೆ ವಿತರಿಸಲಾಗಿದೆ. |
| 2 | 2020-21 | 6 ಕಂಪನಿಗಳು ನೋಂದಣಿಯಾಗಿವೆ | ರೂ.1,25,79,028/- ನ್ನು 8 ESDM ಕಂಪನಿಗಳಿಗೆ ವಿತರಿಸಲಾಗಿದೆ. |
| 3 | 2021-22 | 11 ಕಂಪನಿಗಳು ನೋಂದಣಿಯಾಗಿವೆ | ರೂ.1,39,87,436/- ನ್ನು 13 ESDM ಕಂಪನಿಗಳಿಗೆ ವಿತರಿಸಲಾಗಿದೆ. |

2. ಮೈಸೂರಿನಲ್ಲಿರುವ ಸಾಮಾನ್ಯ ಸೌಲಭ್ಯ ಕೇಂದ್ರ (CFC): ಲಹರಿ:

ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ಮೈಸೂರಿನಲ್ಲಿ ಇಎಸ್ ಡಿಎಂ ಕ್ಲಸ್ಟರ್ ಅನ್ನು ಸ್ಥಾಪಿಸಲಾಗುತ್ತಿದ್ದು, ಈ ಸೌಲಭ್ಯವು ಉದ್ಯಮದ ವಿವಿಧ ಪರೀಕ್ಷೆಗಳು, ಗುಣಮಟ್ಟ ಮತ್ತು ನಿಯಂತ್ರಕ ಅಗತ್ಯಗಳನ್ನು ಪೂರೈಸುತ್ತದೆ. ವೈದ್ಯಕೀಯ ಸಾಧನಗಳು, ಐಟಿ ಹಾಡ್ವೇರ್ ಉತ್ಪನ್ನಗಳು ಮತ್ತು ಸಬ್-ಅಸೆಂಬ್ಲಿಗಳು / ಘಟಕಗಳು, ವಿದ್ಯುತ್ ಮತ್ತು ಇಂಧನ ಉತ್ಪನ್ನಗಳು, ಆಟೋಮೋಟಿವ್ ಇಂಡಸ್ಟ್ರೀಸ್ ಮತ್ತು ಏರೋಸ್ಪೇಸ್ನಂತಹ ಕೈಗಾರಿಕೆಗಳನ್ನು ಒಳಗೊಂಡ ಸಂಪೂರ್ಣ ಎಲೆಕ್ಟ್ರಾನಿಕ್ಸ್ ಉದ್ಯಮಗಳಿಗೆ ಸೇವೆಗಳನ್ನು ಒದಗಿಸುವ ಗುರಿಯನ್ನು ಇದು ಹೊಂದಿದೆ. ಇದು ಸ್ಥಳೀಯ ESDM ಉದ್ಯಮಕ್ಕೆ ಅತ್ಯಾಧುನಿಕ ಸೌಲಭ್ಯಗಳನ್ನು ಹೊಂದಿರುತ್ತದೆ, ಇದು ಉತ್ಪನ್ನ ಮೌಲ್ಯ ಸರಪಳಿಯನ್ನು ಹೆಚ್ಚಿಸಲು ಅನುವು ಮಾಡಿಕೊಡುತ್ತದೆ. ಇಎಂಐ/ಇಎಂಸಿ ಲ್ಯಾಬ್ ಅನ್ನು ಸ್ಥಾಪಿಸಲಾಗುತ್ತಿದೆ ಮತ್ತು ಸೌಲಭ್ಯವನ್ನು ಶೀಘ್ರದಲ್ಲೇ ಉದ್ಘಾಟಿಸಲಾಗುವುದು.

3. ಹುಬ್ಬಳ್ಳಿ ESDM eXchange–HEX/(VLSI ಇನ್ಕ್ಯುಬೇಷನ್ ಸೆಂಟರ್) ಹುಬ್ಬಳ್ಳಿಯಲ್ಲಿ:

ಈ ಯೋಜನೆಯನ್ನು ಮೊದಲು ವಿಎಲ್ಎಸ್ಐ / ಇಎಸ್ಡಿಎಂ ಇನ್ಕ್ಯುಬೇಷನ್ ಸೆಂಟರ್ ಎಂದು ಕರೆಯಲಾಗುತ್ತಿತ್ತು, ಈ ಯೋಜನೆಯನ್ನು ಜುಲೈ 2017 ರಲ್ಲಿ ಉತ್ತರ ಕರ್ನಾಟಕದಲ್ಲಿ ವಿಎಲ್ಎಸ್ಐ ಮತ್ತು ಇಎಸ್ಡಿಎಂ ಸ್ಟಾರ್ಟ್‌ಅಪ್ಗಳನ್ನು ಉತ್ತೇಜಿಸುವ ದೃಷ್ಟಿಕೋನದೊಂದಿಗೆ ಪ್ರಾರಂಭಿಸಲಾಯಿತು. ಈ ಯೋಜನೆಯನ್ನು ಮಾರ್ಚ್ 2020 ರಲ್ಲಿ ಜುಲೈ 2022 ರವರೆಗೆ ಎರಡು ವರ್ಷಗಳ ವಿಸ್ತರಣೆಯನ್ನು ಪಡೆಯಲಾಯಿತು. ಕೆಎಲ್ಇ ಟೆಕ್ ಪಾರ್ಕ್, ಕೆಎಲ್ಇ ತಾಂತ್ರಿಕ ವಿಶ್ವವಿದ್ಯಾಲಯ, ಹುಬ್ಬಳ್ಳಿ, ಕರ್ನಾಟಕದಲ್ಲಿರುವ ಈ ಕೇಂದ್ರಕ್ಕೆ ಹೆಕ್ಸ್ - ಹುಬ್ಬಳ್ಳಿ ESDM eXchange ಎಂದು ಮರುನಾಮಕರಣ ಮಾಡಲಾಯಿತು.

ಇನ್ಕ್ಯುಬೇಶನ್ ಕೇಂದ್ರದಲ್ಲಿನ ಸೌಲಭ್ಯಗಳನ್ನು ಬಳಸಲಾಗುತ್ತಿದೆ ಮತ್ತು ಪ್ರಸ್ತುತ 10 ಸ್ಟಾರ್ಟ್‌ಅಪ್‌ಗಳಿಗೆ ಕಾವು ನೀಡಲಾಗಿದೆ.

4. ESDM ಅಡಿಯಲ್ಲಿ ವಿಶೇಷ ಪ್ರೋತ್ಸಾಹಕ ಯೋಜನೆ:

ಕರ್ನಾಟಕ ಸರ್ಕಾರವು "ಇಎಸ್‌ಡಿಎಂ ಸೆಕ್ಟರ್ 2020 -2025 ಗಾಗಿ ಕರ್ನಾಟಕ ವಿಶೇಷ ಪ್ರೋತ್ಸಾಹಕ ಯೋಜನೆ" ಯನ್ನು ಜಿಒ ಡಿಟಿ ಮೂಲಕ ಘೋಷಿಸಿದೆ. ಸೆಪ್ಟೆಂಬರ್ 7, 2020, ರಾಜ್ಯದಲ್ಲಿನ ಅರ್ಹ ಇಎಸ್ ಡಿಎಂ ವಲಯದ ಹೂಡಿಕೆಗಳಿಗೆ ವಿವಿಧ ಪ್ರೋತ್ಸಾಹಕಗಳು ಮತ್ತು ರಿಯಾಯಿತಿಗಳನ್ನು ನೀಡುವುದು. ಬಂಡವಾಳ ಹೂಡಿಕೆ ಸಬ್ಸಿಡಿ, ಮುದ್ರಾಂಕ ಶುಲ್ಕ ಮತ್ತು ನೋಂದಣಿ ಶುಲ್ಕಗಳ ಮರುಪಾವತಿ, ಭೂ ಪರಿವರ್ತನೆ ಶುಲ್ಕಗಳ ಮರುಪಾವತಿ, ವಿದ್ಯುತ್ ದರ ಮರುಪಾವತಿ, ವಿದ್ಯುಚ್ಛಕ್ತಿ ಸುಂಕದಿಂದ ವಿನಾಯಿತಿ ಮತ್ತು ಉತ್ಪಾದನಾ ಸಂಬಂಧಿತ ಪ್ರೋತ್ಸಾಹಕವನ್ನು ಈ ಯೋಜನೆಯಡಿ ನೀಡಲಾಗುತ್ತಿದೆ.

ಯೋಜನೆಗಳ ಉದ್ದೇಶಗಳು:

- ವಿದ್ಯುನ್ಮಾನ ಉತ್ಪಾದನೆ ಮತ್ತು ಅಸೆಂಬ್ಲಿ ಘಟಕಗಳಿಗೆ ಕರ್ನಾಟಕವನ್ನು ಆದ್ಯತೆಯ ಹೂಡಿಕೆಯ ತಾಣವನ್ನಾಗಿ ಮಾಡುವುದು.
- ಇಎಸ್ ಡಿಎಂ ವಲಯಕ್ಕೆ ಕರ್ನಾಟಕವನ್ನು ಜಾಗತಿಕವಾಗಿ ಸ್ಪರ್ಧಾತ್ಮಕವಾಗಿಸಲು ಅಸ್ತಿತ್ವದಲ್ಲಿರುವ ಸಾಮರ್ಥ್ಯಗಳನ್ನು ಬಳಸಿಕೊಳ್ಳುವುದು.
- ಮುಂದಿನ 5 ವರ್ಷಗಳಲ್ಲಿ ರೂ.5000 ಕೋಟಿಗಳ ಹೂಡಿಕೆಯ ಗುರಿ.
- ಸುಮಾರು 43000 ನೇರ ಉದ್ಯೋಗಾವಕಾಶಗಳ ಸೃಷ್ಟಿಗೆ ಅನುವು ಮಾಡಿಕೊಡುವುದು.

3. <u>ಸ್ಟಾರ್ಟ್‌ಅಪ್ ಪಾಲಿಸಿ</u> –

**ಕರ್ನಾಟಕ ಸ್ಟಾರ್ಟ್‌ಅಪ್ ನೀತಿ 2015-2020ರಡಿ ಗುರಿಗಳನ್ನು ಅನುಷ್ಠಾನ ಮಾಡಲು ಕಾರ್ಯ ನೀತಿಗಳು**

- "New Age Innovation Network" ಮೂಲಕ ಶಿಕ್ಷಣದಲ್ಲಿ ಉದ್ಯಮಶೀಲತೆ
- ಟಿ.ಬಿ.ಐ.ಗಳ ಮೂಲಕ R&D ಸಂಸ್ಥೆಗಳು ಹಾಗೂ ಕೈಗಾರಿಕೋದ್ಯಮಗಳ ನಡುವೆ ಪಾಲುದಾರಿಕೆಯನ್ನು ಬಲಪಡಿಸುವುದು.
- Idea2PoC ಅನುದಾನದ ಯೋಜನೆ ಮೂಲಕ ಪೂರ್ವಹಂತದ ಅನುದಾನ
- ಸಾರ್ವಜನಿಕ-ಖಾಸಗಿ ಸಹಭಾಗಿತ್ವ (PPP) ಮೂಲಕ ಪರಿಪೋಷಣಾ ಮೂಲಸೌಕರ್ಯ
- ನಿಧಿಗಳ ನಿಧಿ [Fund of Funds] ಮೂಲಕ ನವೋದ್ಯಮಗಳಿಗೆ ಅನುದಾನ
- ಸಾಮಾಜಿಕ ಪರಿಣಾಮಕ್ಕಾಗಿ ನಾವೀನ್ಯತೆಯನ್ನು ವಾಹಿನಿಗೊಳಿಸುವುದು
- ಅನುಭವಕ್ಕಾಗಿ ಭೇಟಿಗಳು ಮತ್ತು ಕಾರ್ಯಾಗಾರಗಳ ಮೂಲಕ ಸಾಮರ್ಥ್ಯ ವರ್ಧನೆಯನ್ನು ಪ್ರೋತ್ಸಾಹಿಸುವುದು.
- ಪ್ರೋತ್ಸಾಹಕಗಳು ಮತ್ತು ರಿಯಾಯಿತಿಗಳ ಮೂಲಕ ರಾಜ್ಯ ಸರ್ಕಾರದ ಬೆಂಬಲ ಒದಗಿಸುವುದು
- ಪ್ರೋತ್ಸಾಹಕಗಳು ಮತ್ತು ರಿಯಾಯಿತಿಗಳು: ಸರಕು ಮತ್ತು ಸೇವಾ ತೆರಿಗೆ (GST), ಪೇಟೆಂಟ್ ಮತ್ತು ಮಾರ್ಕೆಟಿಂಗ್ ಗಾಗಿ ತಗಲಿದ ವೆಚ್ಚಗಳ ಮರುಪಾವತಿ
- ಕರ್ನಾಟಕ ಸ್ಟಾರ್ಟ್‌ಅಪ್ ಕೋಶ ಮತ್ತು ಸ್ಟಾರ್ಟ್‌ಅಪ್ ಪೋರ್ಟಲ್ ಮೂಲಕ ಅನುಕೂಲ ನಿರ್ಮಾಣ
- ನ್ಯೂ ಏಜ್ ಇನ್ನೋವೇಶನ್ ನೆಟ್‌ವರ್ಕ್ [NAIN] : ನ್ಯೂ ಏಜ್ ಇನ್ನೋವೇಶನ್ ನೆಟ್‌ವರ್ಕ್ ಹಂತ-2 ಮತ್ತು ಹಂತ-3ರ ನಗರಗಳಲ್ಲಿರುವ ಎಂಜಿನಿಯರಿಂಗ್ ಮತ್ತು ಎಂಜಿನಿಯರಿಂಗ್ ಹೊರತಾದ ಕಾಲೇಜುಗಳಿಗಾಗಿ ಕರ್ನಾಟಕದ ಸ್ಟಾರ್ಟ್‌ಅಪ್ ಪಾಲಿಸಿಯಡಿ . [2015-20] ಪ್ರಮುಖ ಕಾರ್ಯಕ್ರಮಗಳಲ್ಲೊಂದಾಗಿದೆ. ಉದ್ಯಮಶೀಲತೆ ಮತ್ತು ನಾವೀನ್ಯತೆಯನ್ನು ಉತ್ತೇಜಿಸುವ ಸಲುವಾಗಿ ವಿದ್ಯಾರ್ಥಿಗಳ ನಾವೀನ್ಯತಾಪೂರ್ಣ ಕಾರ್ಯಯೋಜನೆಗಳಿಗೆ ಅನುದಾನ ಒದಗಿಸಿ ಆಯ್ಕೆಗೊಂಡ ಶೈಕ್ಷಣಿಕ ಸಂಸ್ಥೆಗಳಿಗೆ ಒಂದು ಪಠ್ಯ ಶಿಸ್ತಿನಲ್ಲಿ **"ಡಿಸ್ಟ್ರಿಕ್ಟ್ ಇನ್ನೋವೇಶನ್ ಹಬ್** [DIH]" ಸ್ಥಾಪಿಸಲು ಸಹಾಯ ಒದಗಿಸಲಾಗುತ್ತದೆ. ಈ ರೀತಿಯಾಗಿ ಪ್ರತಿಯೊಂದು ಡಿಸ್ಟ್ರಿಕ್ಟ್ ಇನ್ನೋವೇಶನ್ ಹಬ್ ಇಂದ ಹತ್ತು ತಂಡಗಳು ಆಯ್ಕೆಗೊಂಡಿವೆ ಹಾಗೂ ಪ್ರತಿ ನಾವೀನ್ಯತಾ ಪರಿಕಲ್ಪನೆಗೆ ಗರಿಷ್ಠ **ರೂ.3.00 ಲಕ್ಷಗಳವರೆಗಿನ** ಅನುದಾನವನ್ನು ನೀಡಲಾಗುತ್ತದೆ.
- ಸ್ಥಳೀಯ ಸಮಸ್ಯೆಗಳನ್ನು ಪರಿಹರಿಸುವಲ್ಲಿ ವಿದ್ಯಾರ್ಥಿಗಳು, ಸಂಶೋಧನೆ ನಡೆಸುತ್ತಿರುವವರು ಹಾಗೂ ಹಳೆಯ ವಿದ್ಯಾರ್ಥಿಗಳು ತಮ್ಮ ಪರಿಕಲ್ಪನೆಗಳನ್ನು ಹಂಚಿಕೊಳ್ಳಲು ಸದರಿ ಯೋಜನೆಯ ಪ್ರಮುಖ ಉದ್ದೇಶವಾಗಿದೆ. ಅಂತಹ ಪರಿಕಲ್ಪನೆಗಳನ್ನು ಪುರಾವೆಗೆ ಪರಿವರ್ತಿಸಲು ಸದರಿ District Innovation Hub ಪೂರಕ ವಾತಾವರಣವನ್ನು ಒದಗಿಸುತ್ತದೆ. ಯಶಸ್ವಿ ಪರಿಪೋಷಣೆಯ ನಂತರ, ವ್ಯವಹಾರದ ಉದ್ದಿಮೆ ಸ್ಥಾಪಿಸುವಲ್ಲಿ ವಿದ್ಯಾರ್ಥಿಗಳಿಗೆ ಉತ್ತೇಜನ ನೀಡಿ ಪ್ರೋತ್ಸಾಹಿಸಲಾಗುತ್ತದೆ.
- ಸ್ಟಾರ್ಟ್‌ಅಪ್ ನೀತಿಯನ್ವಯ, NAINರಡಿಯಲ್ಲಿ 50 DIHಗಳನ್ನು ಸ್ಥಾಪಿಸುವುದಿದೆ. ಪ್ರಸ್ತುತದವರೆಗೆ, 40 DIHಗಳು ಕಾರ್ಯ ನಿರ್ವಹಿಸುತ್ತಿದೆ.

4. <u>AVGC (ಅನಿಮೇಷನ್ ವಿಷುಯಲ್ ಎಫೆಕ್ಟ್ಸ್, ಗೇಮಿಂಗ್ ಮತ್ತು ಕಾಮಿಕ್ಸ್) ಪಾಲಿಸಿ:</u>

- ಕರ್ನಾಟಕ ಸರ್ಕಾರವು ಅಂದಾಜು ರೂ 48.00 ಕೋಟಿಗಳಲ್ಲಿ AVGC ಸೆಂಟರ್ ಆಫ್ ಎಕ್ಸಲೆನ್ಸ್ (COE) ಅನ್ನು ಸ್ಥಾಪಿಸಿದ್ದು, ಈಗಾಗಲೇ ಈ ಸಂಬಂಧ ರೂ.33.00 ಕೋಟಿಗಳನ್ನು ಬಿಡುಗಡೆ ಮಾಡಲಾಗಿದ್ದು, AVGC ಸೆಂಟರ್ ಆಫ್ ಎಕ್ಸಲೆನ್ಸ್ (COE) ಯು ಕಾರ್ಯನಿರ್ವಹಿಸುತ್ತಿದೆ.

- Idea2PoC / ELEVATE ಯೋಜನೆಯಡಿಯಲ್ಲಿ ಸರ್ಕಾರವು AVGC ಸೆಕ್ಟರ್‌ಗಳಿಂದ 31 ಸ್ಟಾರ್ಟ್‌ಅಪ್‌ಗಳಿಗೆ ನಾವು ಹಣ ನೀಡಿದ್ದೇವೆ. ಒಟ್ಟು ಬದ್ಧ ಅನುದಾನ ರೂ.6.63 ಕೋಟಿ.

<u>ಡಿಜಿಟಲ್ ಆರ್ಟ್ಸ್ ಕೇಂದ್ರಗಳು (DAC):</u>

- ಸಾಂಪ್ರದಾಯಿಕ ಲಲಿತ ಕಲೆಗಳ ಕಾಲೇಜುಗಳು ಡಿಜಿಟಲ್ ಅಳವಡಿಸಿಕೊಳ್ಳಲು ಡಿಜಿಟಲ್ ಆರ್ಟ್ಸ್ ಕೇಂದ್ರಗಳು (DAC) ಸಹಾಯಕವಾಗುತ್ತವೆ. ಕರ್ನಾಟಕ ಸರ್ಕಾರವು ಲಲಿತ ಕಲೆಗಳ ಕಾಲೇಜುಗಳಲ್ಲಿ ಡಿಜಿಟಲ್ ಪ್ರಯೋಗಾಲಯವನ್ನು ಸ್ಥಾಪಿಸಿಕೊಂಡು ಡಿಜಿಟಲ್ ಚಟುವಟಿಕೆಗಳನ್ನು ಅಳವಡಿಸಿಕೊಳ್ಳಲು ಅನುದಾನವನ್ನು ಒದಗಿಸಿ ಕರ್ನಾಟಕದೆಲ್ಲೆಡೆ ಬೆಂಬಲಿಸುತ್ತಿದೆ.
- ಕರ್ನಾಟಕ ಸರ್ಕಾರಕ್ಕಾಗಿ ABAI-DAC ಅಂಗವು ಸದರಿ ಯೋಜನೆಯನ್ನು ಕೈಹಿಡಿದು ನಡೆಸುತ್ತಿದೆ ಪ್ರಕ್ರಿಯೆಗೆ ಅನುವು ಮಾಡಿಕೊಟ್ಟು ತರಬೇತಿ, ಪಠ್ಯಕ್ರಮ ಮತ್ತು ಕೈಗಾರಿಕಾ ಕ್ಷೇತ್ರವನ್ನು ಜೋಡಿಸಿಕೊಳ್ಳಲು ಸಹಾಯ ಮಾಡುತ್ತಿದೆ.
- ನಿರ್ಮಾಣ ಹಂತದ ಪ್ಲಗ್ & ಪ್ಲೇ model ಅನ್ನು ಸೃಜಿಸಲು, ವಿಶಿಷ್ಟವಾದ, ಅಂತಹ ಮೊಟ್ಟಮೊದಲ ರೀತಿಯ ಫಿನಿಷಿಂಗ್ ಶಾಲೆಯನ್ನು ಸರ್ಕಾರವು ಸ್ಥಾಪಿಸಿದೆ.
- ಕಿಟ್ವೆನ್ ಫಂಡ್ಸ್ 4 ರನ್ನು AVGC ಕಂಪನಿ ಗಳಿಗೆ ಬೆಂಬಲವನ್ನು ನೀಡಲು ಸರ್ಕಾರವು ಯೋಜನೆಯನ್ನು AVGC ಅನ್ವಯ ಜಾರಿಗೊಳಿಸಿದೆ.

5. ಜೈವಿಕ ತಂತ್ರಜ್ಞಾನ ಪಾಲಿಸಿ

| ಜೈವಿಕ ತಂತ್ರಜ್ಞಾನ ನೀತಿಯನ್ನು ಅನುಷ್ಠಾನಗೊಳಿಸಲು ಕೈಗೊಂಡ ಕ್ರಮಗಳು | |
|---|---|
| ವರ್ಷ | ವಿವರಗಳು |
| | ➢ ಜೈವಿಕ ತಂತ್ರಜ್ಞಾನ ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮದ ಮೂರನೇ ಬ್ಯಾಚ್ ಅನ್ನು ಪ್ರಾರಂಭಿಸಲಾಯಿತು<br>➢ ಕರ್ನಾಟಕ ಸ್ಟಾರ್ಟ್‌ಅಪ್ ಅಡ್ವಾನ್ಸ್‌ಮೆಂಟ್ ಪ್ರೋಗ್ರಾಂ BIO- 50 ನ ಎರಡನೇ ಸಮೂಹವನ್ನು ಪ್ರಾರಂಭಿಸಲಾಯಿತು<br>➢ ಬೆಂಗಳೂರಿನ ಸಿ-ಕ್ಯಾಂಪ್‌ನ ಸೆಂಟರ್ ಆಫ್ ಎಕ್ಸಲೆನ್ಸ್ (COE) ಫಾರ್ ಅಗ್ರಿಯಲ್ಲಿ- ಇಮ್ಮರ್ಶನ್ ಫೆಲೋಗಳ ಆಯ್ಕೆ<br>➢ MAHE ಮಣಿಪಾಲದ GoK ಬಯೋಇನ್ಕ್ಯುಬೇಟರ್ನ ಉದ್ಘಾಟನೆ<br>➢ ಬೆಂಗಳೂರು ಹೆಲಿಕ್ಸ್ ಬಯೋಟೆಕ್ ಪಾರ್ಕ್ ನಲ್ಲಿರುವ ಇನ್ಸ್ಟಿಟ್ಯೂಟ್ ಫಾರ್ ಬಯೋಇನ್ಫರ್ಮ್ಯಾಟಿಕ್ಸ್ ಮತ್ತು ಅಪ್ಲೈಡ್ ಬಯೋಟೆಕ್ನಾಲಜ (IBAB), ಸೆಂಟರ್ ಫಾರ್ ಹ್ಯೂಮನ್ ಜೆನೆಟಿಕ್ಸ್ (CHG) ಮತ್ತು ಬೆಂಗಳೂರು ಬಯೋಇನೋವೇಶನ್ ಸೆಂಟರ್ (BBC) ಗೆ ಧನಸಹಾಯ |
| 2019-20 | ➢ ಬೆಂಗಳೂರಿನ IBAB ನಲ್ಲಿ ಸಿಂಥೆಟಿಕ್ ಬಯಾಲಜಿ ಮತ್ತು ಬಯೋ-ಐಟಿ ಯೋಜನೆಗಳಿಗೆ ಧನಸಹಾಯ<br>➢ ಬಯೋವೆಂಚರ್ ಫಂಡ್ KITVEN-3 ನಲ್ಲಿ ಹೂಡಿಕೆ<br>➢ ನೋಂದಾಯಿತ ಜೈವಿಕ ತಂತ್ರಜ್ಞಾನ ಸ್ಟಾರ್ಟ್‌ಅಪ್‌ಗಳು ಮತ್ತು ಉದ್ಯಮಗಳಿಗೆ ವೈಜ್ಞಾನಿಕ ಪೇಟೆಂಟ್ ಡೇಟಾಬೇಸ್‌ಗಳ ಬಳಕೆಯ ಪೈಲಟ್ ಯೋಜನೆ<br>➢ ಇಂಡಿಯಾ ಬಯೋ ಶೃಂಗಸಭೆಯನ್ನು ಬೆಂಗಳೂರು ಟೆಕ್ ಸಮ್ಮಿಟ್ 2019 ರಲ್ಲಿ ಹಮ್ಮಿಕೊಳ್ಳಲಾಯಿತು<br>➢ ಈ ಅವಧಿಯಲ್ಲಿ, ದಿ ಬೆಂಗಳೂರು ಸೇಲ್ಸ್ ಕಾರ್ಪೊರೇಷನ್, ಜೆನಿ ಲ್ಯಾಬೋರೇಟರೀಸ್ ಪ್ರೈವೇಟ್ ಲಿಮಿಟೆಡ್ ಮತ್ತು ಡೆಕ್ಸೊಪ್ಸೀಸ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಕಂಪನಿಗಳು ಬಯೋಟೆಕ್ನಾಲಜಿ ಕಂಪನಿಗಳು ಎಂದು ನೋಂದಾಯಿಸಲಾಯಿತು.<br>➢ ಟ್ರೈಫೇಸ್ ಫಾರ್ಮಾಸ್ಯುಟಿಕಲ್ಸ್ ಪ್ರೈವೇಟ್ ಲಿಮಿಟೆಡ್, ಸ್ಟೆಂಪ್ಯೂಟಿಕ್ಸ್ ರಿಸರ್ಚ್ ಪ್ರೈವೇಟ್ ಲಿಮಿಟೆಡ್, ಕೆಮ್‌ವೆಲ್ ಬಯೋಫಾರ್ಮಾ ಪ್ರೈವೇಟ್ ಲಿಮಿಟೆಡ್, ಗಂಗಜನ್ ಬಯೋಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಮತ್ತು ಜಿನೀ ಲ್ಯಾಬೋರೇಟರೀಸ್ ಪ್ರೈವೇಟ್ ಲಿಮಿಟೆಡ್ ಹಣಕಾಸಿನ ಪ್ರೋತ್ಸಾಹ ಮತ್ತು ರಿಯಾಯಿತಿಗಳನ್ನು ಪಡೆದುಕೊಂಡಿವೆ. |

| | |
|---|---|
| 2020-21 | ➢ ಬೆಂಗಳೂರಿನ ಬೆಂಗಳೂರು ಲೈಫ್ ಸೈನ್ಸಸ್ ಪಾರ್ಕ್‌ಗೆ ಭೂಮಿ ಪೂಜೆಯೊಂದಿಗೆ ಶಿಲಾನ್ಯಾಸ<br>➢ ಜೈವಿಕ ತಂತ್ರಜ್ಞಾನ ಕೌಶಲ್ಯ ವರ್ಧನೆ ಕಾರ್ಯಕ್ರಮ - ಮೂರು ತಿಂಗಳ ಅಲ್ಪಾವಧಿಯ ಆನ್‌ಲೈನ್ ತರಬೇತಿ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು<br>➢ ಕರ್ನಾಟಕ ಸ್ಟಾರ್ಟ್‌ಅಪ್ ಅಡ್ವಾನ್ಸ್‌ಮೆಂಟ್ ಪ್ರೋಗ್ರಾಂ BIO- 50 ನ ಮೂರನೇ ಸಮೂಹವನ್ನು ಪ್ರಾರಂಭಿಸಲಾಯಿತು<br>➢ ಬೆಂಗಳೂರು ಹೆಲಿಕ್ಸ್ ಬಯೋಟೆಕ್ ಪಾರ್ಕ್, ಬೆಂಗಳೂರಿನಲ್ಲಿರುವ IBAB, CHG ಮತ್ತು BBC ಸಂಸ್ಥೆಗಳಿಗೆ ಧನಸಹಾಯ<br>➢ ಬೆಂಗಳೂರಿನ IBAB ನಲ್ಲಿ ಸಿಂಥೆಟಿಕ್ ಬಯಾಲಜಿ ಮತ್ತು ಬಯೋ -ಐಟಿ ಯೋಜನೆಗಳಿಗೆ ಧನಸಹಾಯ<br>➢ ಬಯೋವೆಂಚರ್ ಫಂಡ್ KITVEN-3 ನಲ್ಲಿ ಹೂಡಿಕೆ<br>➢ ಇಂಡಿಯಾ ಬಯೋ ಶೃಂಗಸಭೆಯನ್ನು ಬೆಂಗಳೂರು ಟೆಕ್ ಸಮ್ಮಿಟ್ 2020 ರಲ್ಲಿ ಹಮ್ಮಿಕೊಳ್ಳಲಾಯಿತು<br>➢ ಕರ್ನಾಟಕ ಜೈವಿಕ ಆರ್ಥಿಕ ವರದಿ 2020 ನ್ನು ಬಿಡುಗಡೆ ಮಾಡಲಾಯಿತು<br>➢ ಈ ಅವಧಿಯಲ್ಲಿ ವಿದ್ಯಾ ಹರ್ಬ್ಸ್ ಪ್ರೈವೇಟ್ ಲಿಮಿಟೆಡ್ ಬಯೋಟೆಕ್ನಾಲಜಿ ಕಂಪನಿ ಎಂದು ನೋಂದಾಯಿಸಲಾಗಿದೆ.<br>➢ ಸ್ಟೆಂಪ್ಯೂಟಿಕ್ಸ್ ರಿಸರ್ಚ್ ಪ್ರೈವೇಟ್ ಲಿಮಿಟೆಡ್ ಹಣಕಾಸಿನ ಪ್ರೋತ್ಸಾಹ ಮತ್ತು ರಿಯಾಯಿತಿಗಳನ್ನು ಪಡೆದುಕೊಂಡಿದೆ. |
| 2021-22 | ➢ ಬೆಂಗಳೂರಿನ ಸಿ-ಕ್ಯಾಂಪ್‌ನಲ್ಲಿ ಅಗ್ರಿ-ಇನ್ನೋವೇಶನ್‌ಗಾಗಿ ಶ್ರೇಷ್ಠತೆಯ ಕೇಂದ್ರದ ಅಡಿಯಲ್ಲಿ ಕೃಷಿ ಗ್ರಾಂಡ್ ಚಾಲೆಂಜ್ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು.<br>➢ ಬೆಂಗಳೂರಿನ IBAB ನಲ್ಲಿ ಪ್ರತಿ ನಂಜು ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರ (ಎವಿಆರ್ ಡಿಸಿ) ಸ್ಥಾಪನೆಗೆ ಉಪಕ್ರಮ.<br>➢ ಮಂಗಳೂರಿನ ಫಿಶರೀಸ್ ಕಾಲೇಜಿನಲ್ಲಿ ಅಕ್ವಾ-ಮರೈನ್ (ಎಬಿಐಸಿ ಫಾರ್ ಎಎಮ್) ಸುಧಾರಿತ ಬಯೋಟೆಕ್ ಇನ್ನೋವೇಶನ್ ಸೆಂಟರ್ ಅನ್ನು ಸ್ಥಾಪಿಸಲು ಉಪಕ್ರಮ.<br>➢ ಜೀವ ವಿಜ್ಞಾನ ಮತ್ತು ಜೈವಿಕ ತಂತ್ರಜ್ಞಾನದಲ್ಲಿ ಬೋಧಕ ತರಬೇತಿ ಕಾರ್ಯಕ್ರಮ ಮತ್ತು ಉದ್ಯಮಶೀಲತೆ ಅಭಿವೃದ್ಧಿ ಕಾರ್ಯಕ್ರಮವನ್ನು ಒದಗಿಸಲು 7 ಪಾಲುದಾರ ಸಂಸ್ಥೆಗಳೊಂದಿಗೆ DBT ಕೌಶಲ್ಯ ವಿಜ್ಞಾನ ರಾಜ್ಯ ಸಹಭಾಗಿತ್ವ ಕಾರ್ಯಕ್ರಮವನ್ನು ಪ್ರಾರಂಭಿಸಲಾಗಿದೆ.<br>➢ ಬೆಂಗಳೂರು ಹೆಲಿಕ್ಸ್ ಬಯೋಟೆಕ್ ಪಾರ್ಕ್, ಬೆಂಗಳೂರಿನಲ್ಲಿರುವ IBAB, CHG ಮತ್ತು BBC ಸಂಸ್ಥೆಗಳಿಗೆ ಧನಸಹಾಯ.<br>➢ K-tech - ಕ್ಯಾಲಿಫೋರ್ನಿಯಾ ಲೈಫ್ ಸೈನ್ಸಸ್ ಇನ್ಸ್ಟಿಟ್ಯೂಟ್ (CLSI) ವರ್ಚುವಲ್ ಸ್ಟಾರ್ಟ್‌ಅಪ್ಸ್ ಇಂಟರ್ನ್ಯಾಷನಲ್ ಆಕ್ಸಿಲರೇಶನ್ ಪ್ರೋಗ್ರಾಂ ಅನ್ನು ಪ್ರಾರಂಭಿಸಲಾಯಿತು.<br>➢ ಇಂಡಿಯಾ ಬಯೋ ಶೃಂಗಸಭೆಯನ್ನು ಬೆಂಗಳೂರು ಟೆಕ್ ಸಮ್ಮಿಟ್ 2021 ರಲ್ಲಿ ಹಮ್ಮಿಕೊಳ್ಳಲಾಯಿತು. |

## ಅನುಬಂಧ-2

ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತವು (ಕಿಯೋನಿಕ್ಸ್) ಕಳೆದ ಮೂರು ವರ್ಷಗಳಲ್ಲಿ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ (CSR) ಯಡಿಯಲ್ಲಿ ವೆಚ್ಚ ಮಾಡಿರುವ ವಿವರ ಈ ಕೆಳಕಂಡಂತಿದೆ:-

ಹಣಕಾಸಿನ ವರ್ಷ - 2019-20

ಅಧಿನಿಯಮ ಪರಿಚ್ಛೇಧ 135 ಅನುಸಾರ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ (CSR) ಯಡಿಯಲ್ಲಿ ಖರ್ಚು ಮಾಡಬೇಕಾಗಿದ್ದ ಮೊತ್ತ ರೂ. 29,05,000/-.

ಖರ್ಚು ಮಾಡಿರುವ ಮೊತ್ತ ರೂ. 55,00,000/-ಹಿಂದಿನ ವರ್ಷಗಳಲ್ಲಿ ಖರ್ಚು ಮಾಡದೇ ಉಳಿದಿರುವ ಮೊತ್ತ ರೂ. 25,95,000/-ಗಳು ಒಳಗೊಂಡಿರುತ್ತದೆ, ಅಂದರೆ ರೂ. 29,05,000/- + ರೂ. 25,95,000/-)

| ಅನುಷ್ಠಾನಗೊಳಿಸಿದ ಏಜೆನ್ಸಿಯ ಹೆಸರು | ಸಿಎಸ್‌ಆರ್ ಯೋಜನೆ | ಬಿಡುಗಡೆಯಾದ ಹಣ | ಷರಾ |
|---|---|---|---|
| ಪೊಲೀಸ್ ಪಬ್ಲಿಕ್ ಸ್ಕೂಲ್, ಕೋರಮಂಗಲ, ಬೆಂಗಳೂರು | ಬೆಂಗಳೂರಿನ ಶಾಲೆಯಲ್ಲಿ ಕಂಪ್ಯೂಟರ್ ಲ್ಯಾಬ್‌ನ ಸ್ಥಾಪನೆ | 15,00,000 | - |
| ಜಿಲ್ಲಾಧಿಕಾರಿಗಳು, ಚಿಕ್ಕಮಗಳೂರು ಜಿಲ್ಲೆ | ಚಿಕ್ಕಮಗಳೂರು ಜಿಲ್ಲೆಯ ಅಂಗಡಿ ಹಳ್ಳಿಯ ಕೆರೆಯ ಅಭಿವೃದ್ಧಿ | 40,00,000 | ಈ ಮೊತ್ತವು ಜಿಲ್ಲಾಧಿಕಾರಿಗಳು, ಚಿಕ್ಕಮಗಳೂರು ಜಿಲ್ಲೆ ರವರಿಂದ ಖರ್ಚು ಮಾಡದೇ ದಿನಾಂಕ: 07.07.2022ರಂದು ಹಿಂದಿರುಗಿ-ಸಿರುತ್ತಾರೆ. ಈ ಹಣವನ್ನು 2022-23ನೇ ಸಾಲಿನಲ್ಲಿ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ (CSR) ಅಡಿಯಲ್ಲಿ ಖರ್ಚು ಮಾಡಲು ಯೋಜಿಸಲಾಗಿದೆ. |

ಹಣಕಾಸಿನ ವರ್ಷ – 2020-21

ಅಧಿನಿಯಮ ಪರಿಚ್ಛೇಧ 135 ಅನುಸಾರಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ (CSR)ಯಡಿಯಲ್ಲಿ ಖರ್ಚು ಮಾಡಬೇಕಾಗಿದ್ದ ಮೊತ್ತ ರೂ. 38,58,657/-.

ಖರ್ಚು ಮಾಡಿರುವ ಮೊತ್ತ ರೂ. 38,58,657/-

| ಅನುಷ್ಠಾನಗೊಳಿಸಿದ ಏಜೆನ್ಸಿಯ ಹೆಸರು | ಸಿಎಸ್‌ಆರ್ ಯೋಜನೆ | ಬಿಡುಗಡೆಯಾದ ಹಣ | ಷರಾ |
|---|---|---|---|
| ಅಧ್ಯಕ್ಷರು<br>ಮಂಗಳೂರು ಒನ್ ಶಾಲೆ<br>(ಪೀಪಲ್ಸ್ ಟ್ರಸ್ಟ್ನ ಘಟಕ)<br>ತೊಕ್ಕೊಟ್ಟು, ಮಂಗಳೂರು - 575017 | ಶಾಲೆಗೆ ಅವಶ್ಯವಿರುವ ಮೂಲ ಸೌಕರ್ಯವನ್ನು ಅಭಿವೃದ್ಧಿಪಡಿಸಲು | 5,00,000 | - |
| ಧರ್ಮಸ್ಥಳ ಶ್ರೀ ರಾಮಕ್ಷೇತ್ರ ಉಡುಪಿ ಸಮಿತಿ ಎಜ್ಯುಕೇಶನಲ್ ಟ್ರಸ್ಟ್ (ರಿ),ಉಡುಪಿ | ಕೈಗಾರಿಕಾ ತರಬೇತಿ ಕೇಂದ್ರಕ್ಕೆ ಅವಶ್ಯವಿರುವ ಕಂಪ್ಯೂಟರ್, ಪ್ರಿಂಟರ್ ಮತ್ತು ಸ್ಕ್ಯಾನರ್ ಸಲಕರಣೆಗಳ ಮೂಲ ಸೌಕರ್ಯವನ್ನು ಹೆಚ್ಚಿಸಲು | 5,00,000 | - |
| ಶ್ರೀರಾಮ ವಿದ್ಯಾಕೇಂದ್ರ ಟ್ರಸ್ಟ್ (ರಿ),ಹನುಮಾನ್ ನಗರ, ಕಲ್ಲಡ್ಕ, ಬಂಟ್ವಾಳ ತಾಲ್ಲೂಕು, ದ.ಕ | ಕಂಪ್ಯೂಟರ್ ಪ್ರಯೋಗಾಲಯಕ್ಕೆ ಅವಶ್ಯವಿರುವ ಕಂಪ್ಯೂಟರ್, ಪ್ರಿಂಟರ್ ಮತ್ತು ಸ್ಕ್ಯಾನರ್ ಸಲಕರಣೆಗಳ ಮೂಲ ಸೌಕರ್ಯವನ್ನು ಹೆಚ್ಚಿಸಲು | 5,00,000 | - |
| ಜ್ಞಾನಜ್ಯೋತಿ ಸೇವಾ ಟ್ರಸ್ಟ್, ಹೊಸದುರ್ಗ ರೋಡ್, ಹೊಸದುರ್ಗ, ಚಿತ್ರದುರ್ಗ ಜಿಲ್ಲೆ | ಶಾಲೆಯ ಪ್ರಯೋಗಾಲಯಗಳಿಗೆ ಅವಶ್ಯವಿರುವ ಕಂಪ್ಯೂಟರ್ ಸೆಂಟರ್, ಸ್ಮಾರ್ಟ್ ಬೋರ್ಡ್ ಮತ್ತು ಇತರೆ ಲ್ಯಾಬ್ ಸಲಕರಣೆಗಳ ಮೂಲ ಸೌಕರ್ಯವನ್ನು ಹೆಚ್ಚಿಸಲು | 5,00,000 | - |
| ಪಬ್ಲಿಕ್ ಟಿವಿ ಮತ್ತು ರೋಟರಿ ಇಂಟರ್ ನ್ಯಾಶನಲ್ ಸಂಸ್ಥೆ ಬೆಂಗಳೂರು | ಗ್ರಾಮೀಣ ಭಾಗದ ಬಡ ವಿದ್ಯಾರ್ಥಿಗಳಿಗೆ "ಜ್ಞಾನ ದೀವಿಗೆ" ಎಂಬ ಹೆಸರಿನಲ್ಲಿ ಡಿಜಿಟಲ್ ಶಿಕ್ಷಣ ಪಡೆಯಲು- ಟ್ಯಾಬ್ ವಿತರಣೆ | 5,00,000 | - |
| ಅಧ್ಯಕ್ಷರು<br>ದ.ಕ.ಜಿ.ಪಂ. ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆ ದಡ್ಡಲಕಾಡು,<br>ಮೂಡನಡುಗೋಡು ಗ್ರಾಮ,<br>ಬಂಟ್ವಾಳ-574211, ದಕ್ಷಿಣ ಕನ್ನಡ | ಶಾಲೆಗೆ ಅವಶ್ಯವಿರುವ ಕಂಪ್ಯೂಟರ್, ಪ್ರಿಂಟರ್ ಮತ್ತು ಸ್ಕ್ಯಾನರ್ ಸಲಕರಣೆಗಳ ಮೂಲ ಸೌಕರ್ಯವನ್ನು ಹೆಚ್ಚಿಸಲು | 4,50,000 | - |
| ಮುಖ್ಯೋಪಾಧ್ಯಾಯರು<br>ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ, ಶೆಟ್ಟಿಹಳ್ಳಿ, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ | ಶಾಲೆಗೆ ಅವಶ್ಯವಿರುವ ಕಂಪ್ಯೂಟರ್, ಪ್ರಿಂಟರ್ ಮತ್ತು ಸ್ಕ್ಯಾನರ್ ಸಲಕರಣೆಗಳ ಮೂಲ ಸೌಕರ್ಯವನ್ನು ಹೆಚ್ಚಿಸಲು | 4,50,000 | - |
| ಮುಖ್ಯೋಪಾಧ್ಯಾಯರು<br>ಬೆಂಗಳೂರು ನಗರ ಜಿಲ್ಲಾಪಂಚಾಯತ್ ಸರ್ಕಾರಿ ಪ್ರೌಢಶಾಲೆ,<br>ಪ್ಯಾಲೇಸ್ ಗುಟ್ಟಹಳ್ಳಿ,<br>ಬೆಂಗಳೂರು ಉತ್ತರ ವಲಯ-02 | ಶಾಲೆಗೆ ಅವಶ್ಯವಿರುವ ಸಲಕರಣೆಗಳ ಮೂಲ ಸೌಕರ್ಯವನ್ನು ಹೆಚ್ಚಿಸಲು | 2,50,000 | - |
| ಪ್ರಕರಣ 135(6) ರ ಅನುಸಾರ ಖರ್ಚು ಮಾಡದ ಸಿಎಸ್‌ಆರ್ ಮೊತ್ತವನ್ನು PNRF Fund ಗೆ ವರ್ಗಾಯಿಸಲಾಗಿದೆ | ಪ್ರಕರಣ 135(6) ರ ಅನುಸಾರ ಖರ್ಚು ಮಾಡದ ಸಿಎಸ್‌ಆರ್ ಮೊತ್ತವನ್ನು PNRF Fund ಗೆ ವರ್ಗಾಯಿಸಲಾಗಿದೆ | 2,08,657 | - |
| | ಒಟ್ಟು ಮೊತ್ತ | 38,58,657 | |

ಹಣಕಾಸಿನ ವರ್ಷ –2021-22

ಅಧಿನಿಯಮ ಪರಿಚ್ಛೇಧ 135 ಅನುಸಾರಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ (CSR)ಯಡಿಯಲ್ಲಿ ಖರ್ಚು ಮಾಡಬೇಕಾಗಿದ್ದ ಮೊತ್ತ ರೂ. 43,03,000/-.

ಖರ್ಚು ಮಾಡಿರುವ ಮೊತ್ತ ರೂ. 50,00,000/-

| ಅನುಷ್ಠಾನಗೊಳಿಸಿದ ಏಜೆನ್ಸಿಯ ಹೆಸರು | ಸಿಎಸ್ಆರ್ ಯೋಜನೆ | ಬಿಡುಗಡೆಯಾದ ಹಣ | ಷರಾ |
|---|---|---|---|
| ಸರ್ಕಾರಿ ಪಿ.ಯು. ಕಾಲೇಜ್, ಮಣಿನಾಲ್ಕರ್ ಭಂಟ್ವಾಳ್ (ತಾ), ದ.ಕ.(ಜಿ) | ಕಂಪ್ಯೂಟರ್, ಕಂಪ್ಯೂಟರ್ ಟೇಬಲ್, ಚೇರ್ & ಯು.ಪಿ.ಎಸ್.ನ್ನು ಕಲ್ಪಿಸಿಕೊಡಲು | 5,00,000 | - |
| ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ತೊಲಪಲ್ಲಿ, ಬಾಗೇಪಲ್ಲಿ(ತಾ), ಚಿಕ್ಕಬಳ್ಳಾಪುರ(ಜಿ) | ಸ್ಮಾರ್ಟ್ ಕ್ಲಾಸ್ ಎಕ್ಯೂಪ್‌ಮೆಂಟ್, ಕಂಪ್ಯೂಟರ್, ಕಂಪ್ಯೂಟರ್ ಟೇಬಲ್, ಪ್ರಿಂಟರ್, ಡೆಸ್ಕ್, ಟೇಬಲ್, ಲೈಬ್ರರಿ ಪುಸ್ತಕ, ವಾಟರ್ ಫಿಲ್ಟರ್, ಫ್ಯಾನ್, ಕುರ್ಚಿಗಳು ಮತ್ತು ಇನ್ನಿತರೆ ಸಲಕರಣೆಗಳನ್ನು ಕಲ್ಪಿಸಿಕೊಡಲು | 5,00,000 | - |
| ಸರ್ಕಾರಿ ಪ್ರಾಥಮಿಕ ಶಾಲೆ, ಅರಬಾಳ, ಗೊಲ್ಲರಹಟ್ಟಿ, ತರೀಕೆರೆ (ತಾ), ಚಿಕ್ಕಮಗಳೂರು(ಜಿ) | ಸ್ಮಾರ್ಟ್ ಕ್ಲಾಸ್ ಎಕ್ಯೂಪ್‌ಮೆಂಟ್, ಕಂಪ್ಯೂಟರ್, ಕಂಪ್ಯೂಟರ್ ಟೇಬಲ್, ಪ್ರಿಂಟರ್, ಡೆಸ್ಕ್, ಟೇಬಲ್, ಲೈಬ್ರರಿ ಪುಸ್ತಕ, ವಾಟರ್ ಫಿಲ್ಟರ್, ಫ್ಯಾನ್, ಕುರ್ಚಿಗಳು ಮತ್ತು ಇನ್ನಿತರೆ ಸಲಕರಣೆಗಳನ್ನು ಕಲ್ಪಿಸಿಕೊಡಲು | 3,50,000 | - |
| ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಜಿಹೆಚ್‌ಪಿಎಸ್ ಪೂರ್ಣಾಪುರ, ಸಂಜೀವಪ್ಪ ಕಾಲೋನಿ, ಮತ್ತಿಕೆರೆ, ಉತ್ತರ 2, ಬೆಂಗಳೂರು- 560 054 | ಕುಡಿಯುವ ನೀರಿನ ಸಂಪ್, ಕೊಠಡಿಗಳಿಗೆ ಸುರಕ್ಷಾ ಗ್ರಿಲ್, ಕಟ್ಟಡಕ್ಕೆ ಬಣ್ಣ ಮಾಡಿಸುವುದು, ಮಕ್ಕಳಿಗೆ ಪ್ಲಾಸ್ಟಿಕ್ ಚೇರ್, ಸಮಾರಂಭಗಳಿಗೆ ಚೇರ್, ಟೇಬಲ್ಸ್, ಇನ್ನಿತರ ಸಲಕರಣೆಗಳನ್ನು ಕಲ್ಪಿಸಲು | 3,50,000 | - |
| ಮಾಕನಹಳ್ಳಿ ಸಮುದಾಯ ಭವನ ಸೇವಾ ಟ್ರಸ್ಟ್, ಮಾಕನಹಳ್ಳಿ, ಅಜ್ಜಂಪುರ (ತಾ), ಚಿಕ್ಕಮಗಳೂರು (ಜಿ) | ಕಮ್ಯೂನಿಟಿ ಕೊಠಡಿಯ ಅಭಿವೃದ್ಧಿಗಾಗಿ, ಸ್ನಾನಗೃಹ ಮತ್ತು ಶೌಚಾಲಯ ಕೊಠಡಿಗಳು, ನವೀಕರಣ ಕಾರ್ಯಗಳು ಮತ್ತು ಒಳಚರಂಡಿ ಕೆಲಸಗಳಿಗಾಗಿ | 5,00,000 | - |
| ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ತಿರುವಲ್ಲಪುರ, 6ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು- 560003 | ಗ್ರೀನ್ ಬೋರ್ಡ್, ಟೈಲ್ಸ್ ಕಾಮಗಾರಿ, ವಿದ್ಯಾಭ್ಯಾಸ ಸಲಕರಣೆಗಳು, ಚೇರ್‌ಗಳು, ಟೇಬಲ್‌ಗಳು, ಇನ್ನಿತರೆ ಸಲಕರಣೆಗಳನ್ನು ಕಲ್ಪಿಸಲು | 3,50,000 | - |
| ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಮಾರಬ ಘಟ್ಟ, ಹೊಸ-ದುರ್ಗ (ತಾ), ಚಿತ್ರದುರ್ಗ(ಜಿ) | ಕಂಪ್ಯೂಟರ್, ಟೇಬಲ್, ಚೇರ್, ಪ್ರೊಜೆಕ್ಟರ್ ನ್ನು ಕಲ್ಪಿಸಲು | 3,50,000 | - |
| ವಿಕಾಸ ಟ್ರಸ್ಟ್, ಮಧುಕೃಪ, ಪಂಚವಟಿ ಕಾಲೋನಿ, ಶಿವಮೊಗ್ಗ | ಲ್ಯಾಪ್‌ಟಾಪ್ ಮತ್ತು ಎಲ್‌ಸಿಡಿ ಪ್ರೊಜೆಕ್ಟರ್ ಕಲ್ಪಿಸಲು | 3,50,000 | - |
| ಸರ್ಕಾರಿ ಹಿರಿಯ ಶಾಲೆ, ಹಿರಮರಳಿ, ಪಾಂಡವಪುರ (ತಾ), ಮಂಡ್ಯ (ಜಿ) | ವಿದ್ಯಾರ್ಥಿಗಳಿಗೆ ಕುಡಿಯುವ ನೀರಿನ ಸೌಲಭ್ಯಕ್ಕಾಗಿ, ಕೊಠಡಿಗಳ ಕಾಮಗಾರಿಗಾಗಿ, ಕಂಪ್ಯೂಟರ್ ಲ್ಯಾಬ್‌ನ್ನು ಸ್ಥಾಪಿಸಲು | 3,50,000 | - |
| ಸರ್ಕಾರಿ ಪ್ರೌಢ ಶಾಲೆ, ದಡ್ಡಲಕಾಡು,ಮೂಡನಡುಗೋಡು, ಬಂಟ್ವಾಳ (ತಾಲ್ಲೂಕು), ದಕ್ಷಿಣ ಕನ್ನಡ (ಜಿಲ್ಲೆ) | ಶಾಲೆಗೆ ಗಣಕಯಂತ್ರಗಳು, ಗಣಕಯಂತ್ರ ಟೇಬಲ್ಲುಗಳು ಹಾಗೂ ಕುರ್ಚಿಗಳು, ಲೇಸರ್ ಪ್ರಿಂಟರ್ ಸ್ಕ್ಯಾನರ್‌ನೊಂದಿಗೆ ಪ್ರೊಜೆಕ್ಟರ್ ಯುಪಿಎಸ್ ಸಿಸ್ಟಮ್ ಗಳಿಗಾಗಿ | 4,00,000 | - |

| | | | |
|---|---|---|---|
| ಶ್ರೀ ಕಲ್ಪತರು ಸಮುದಾಯ ಪದವಿ ಪೂರ್ವ ಕಾಲೇಜು, ಕಿಟ್ಟದಲ್, ಹೊಸದುರ್ಗ ತಾಲ್ಲೂಕು | ಸ್ಮಾರ್ಟ್ ತರಗತಿಗಳನ್ನು ನಡೆಸುವ ಸಲುವಾಗಿ ಗಣಕಯಂತ್ರಗಳು, ಗಣಕಯಂತ್ರ ಟೇಬಲ್ಲುಗಳು ಮತ್ತು ಪ್ರೊಜೆಕ್ಟರುಗಳಿಗಾಗಿ | 3,00,000 | - |
| ಶ್ರೀ ರಾಮ ವಿದ್ಯಾ ಕೇಂದ್ರ ಟ್ರಸ್ಟ್ (ನೋಂದಾಯಿತ) ಕಲ್ಲಡ್ಕ, ಬಂಟ್ವಾಳ (ತಾಲ್ಲೂಕು) ದಕ್ಷಿಣ ಕನ್ನಡ (ಜಿಲ್ಲೆ) | ಶಾಲೆಗೆ ಗಣಕಯಂತ್ರಗಳು, ಗಣಕಯಂತ್ರ ಟೇಬಲ್ಲುಗಳು ಹಾಗೂ ಕುರ್ಚಿಗಳು ಯುಪಿಎಸ್ ಸಿಸ್ಟಮ್ ಗಳಿಗಾಗಿ | 4,00,000 | - |
| ನೊಲಂಬ ಲಿಂಗಾಯತ ಸಂಘ, ಬೆಂಗಳೂರು | ಡಿಜಿಟಲ್ ವಾಚನಾಲಯ ಸ್ಥಾಪನೆಗಾಗಿ | 3,00,000 | - |
| | ಒಟ್ಟು ಮೊತ್ತ | 50,00,000 | |